KATK010047762023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ.106/2023**

ಪ್ರಾ.ಸಾ. ಃ **5**

**ದೋ.ಸಾ.** ಃ **4**

ದಿ.**29.01.2026**

| | |
|---|---|
| ಹೆಸರು | ಃ ಸುವರ್ಣಮ್ಮ |
| ಗಂಡನ ಹೆಸರು | ಃ ಹುಚ್ಚಯ್ಯ |
| ವಯಸ್ಸು | ಃ **60** ವರ್ಷ |
| ಉದ್ಯೋಗ | ಃ ಗುಬ್ಬಿ ಸರ್ಕಾರಿ ಆಸ್ಪತ್ರೆಯಲ್ಲಿ ಡಿ ಗ್ರೂಪ್ ನೌಕರಿ |
| ವಾಸಸ್ಥಳ | ಃ ಬಾಬು ಜಗಜೀವನ್ ರಾಂ ನಗರ, ಗುಬ್ಬಿ |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ಆರೋಪಿ ಕುಮಾರ ಮತ್ತು ಆತನ ಹೆಂಡತಿ ಮಾಲ ಗೊತ್ತಿದೆ. ನಮ್ಮ ಮನೆ ಅವರ ಮನೆ ಪಕ್ಕ ಇದೆ. ಆರೋಪಿ ಮತ್ತು ಮಾಲಳ ಸಂಸಾರ ಚೆನ್ನಾಗಿತ್ತು. ಮಾಲಳಿಗೆ ಹೊಟ್ಟೆನೋವು ಇತ್ತು, ಹೇಗೆ ಮೃತಪಟ್ಟರು ಎಂದು ಗೊತ್ತಿಲ್ಲ. ಮಾಲ ತನ್ನ ಸಂಸಾರದ ಬಗ್ಗೆ ನನ್ನಲ್ಲಿ ಯಾವತ್ತೂ ಏನೂ ಹೇಳಿಲ್ಲ. ಆಕೆ ಮೃತಪಟ್ಟು ಎಷ್ಟು ವರ್ಷಗಳಾಯಿತು ಎಂದು ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ

ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

2. ಆರೋಪಿ ಪ್ರತಿದಿನ ಮದ್ಯಪಾನ ಮಾಡಿಕೊಂಡು ಬಂದು ಮಾಲಳ ಜೊತೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆತ ಸಂಸಾರಕ್ಕೆ ಯಾವುದೇ ಹಣ ಕೊಡದೆ, ಕೆಲಸವನ್ನು ಮಾಡದೆ ತಿರುಗಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ದುಡಿದ ಹಣವನ್ನು ಕುಡಿತಕ್ಕೆ ಉಪಯೋಗಿಸಿ ಕುಡಿದು ಬಂದು ಮನೆಯಲ್ಲಿ ರಾತ್ರಿ ಹಗಲೂ ಗಲಾಟೆ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಮನೆಗೆ ದಿನಸಿ ತಂದು ಹಾಕುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಾಲ ಸಂಸಾರ ಸಾಕಲು ಸಾಲ ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ಆ ಸಾಲವನ್ನು ತೀರಿಸಲು ಹೇಳಿದರೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದನು, ಮಾಲಳಿಗೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ಅವಾಚ್ಯ ಶಬ್ದಗಳಿಂದ ಬೈದು ಪ್ರಚೋದಿಸುತ್ತಿದ್ದನು ಎಂದರೆ ಸರಿಯಲ್ಲ. ನನಗೆ ಸಂಸಾರ ಸಾಕಾಗಿ ಹೋಗಿದೆ, ನನ್ನ ಗಂಡನ  ಕಿರುಕುಳ ಸಹಿಸಲು ಆಗುತ್ತಿಲ್ಲ, ಸತ್ತುಹೋಗಬೇಕು ಎನಿಸುತ್ತಿದೆ ಎಂದು ಹೇಳಿಕೊಂಡು ಮಾಲ ಅಳುತ್ತಿದ್ದಳು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಅವಳನ್ನು ಸಮಾಧಾನ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ದಿ.17.07.2022 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ನಾನು ಊಟ ಮಾಡಿಕೊಂಡು ಮನೆಯಲ್ಲಿ ಮಲಗುವ ಸಮಯದಲ್ಲಿ ಆರೋಪಿಗೂ ಆತನ ಹೆಂಡತಿಗೂ ಜೋರಾಗಿ ಗಲಾಟೆ ಮಾಡುತ್ತಿದ್ದ ಶಬ್ದ ಕೇಳುತ್ತಿತ್ತು, ನೀನು ಸತ್ತುಹೋಗು ಎಂದು ಆರೋಪಿ ಪ್ರಚೋದನೆ ಮಾತುಗಳನ್ನು ಆಡುತ್ತಿದ್ದನು, ಆರೋಪಿ ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಕರೆದುಕೊಂಡು ಬಂದು ನಮ್ಮ ಮನೆಯಲ್ಲಿ ಮಲಗಿದ್ದರು ಎಂದರೆ ಸರಿಯಲ್ಲ. ಮಾಲ ರಾತ್ರಿ ಕಬ್ಬಿಣದ ಪೈಪಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳು ಎಂದರೆ ಸರಿಯಲ್ಲ.  ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ10 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಹೆಚ್.ಎನ್.ಗುರುನಂಜೇಗೌಡ, ವಕೀಲರಿಂದ ಆರೋಪಿತನ ಪರವಾಗಿ**

ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು